ಆ) ಸಿಂಧನೂರು ತಾಲ್ಲೂಕಿನಲ್ಲಿ ೩ ಪೋಲೀಸ್ ಠಾಣೆಗಳಿವೆ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಸೇರಿದಂತೆ ೬೧ ಪೋಲೀಸ್ ಸಿಬ್ಬಂದಿಗಳು ಇದ್ದಾರೆ.

ಇ) ಬಂದಿದೆ.

ಈ) ಇದನ್ನು ೮ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಆದ್ಯತಾ ಪಟ್ಟಿಯಲ್ಲಿ ಸೇರಿಸಲು ಪರಿಶೀಲಿಸಲಾಗುತ್ತಿದೆ.

ಉ) ದಿನಾಂಕ ೧-೪-೮೯ ರಿಂದ ೩೧-೩-೧೯೯೦ರ ವರೆಗಿನ ಅವಧಿಯಲ್ಲಿ ೨,೨೮,೩೦,೨೪೨-೦೦ ಖರ್ಚಾಗಿದೆ.

## ಮಾರೇನಹಳ್ಳಿಯಲ್ಲಿರುವ ಅಮೃತ್ ಮಹಲ್ ಕಾವಲ್

೬೭೩. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ತಾಲ್ಲೂಕು ಶಾಂತಿ ಗ್ರಾಮದ ಹೋಬಳಿ ಮಾರೇನಹಳ್ಳಿ ಗ್ರಾಮಕ್ಕೆ ಸೇರಿದ ಅಮೃತ್ ಮಹಲ್ ಕಾವಲಿನ ವಿಸ್ತೀರ್ಣವೆಷ್ಟು ?

ಆ) ಈ ಅಮೃತ್ ಮಹಲ್ ಕಾವಲಿನ ಜಮೀನನ್ನು ಕಳೆದ ಹತ್ತು ವರ್ಷಗಳಿಂದಲೂ ಗ್ರಾಮದ ಬಡವರು, ಹರಿಜನರು, ಕೃಷಿ ಕಾರ್ಮಿಕರು, ಒತ್ತುವರಿ ಮಾಡಿ ವ್ಯವಸಾಯ ಮಾಡುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಒತ್ತುವರಿ ಜಮೀನನ್ನು ಒತ್ತುವರಿ ಮಾಡಿದ ಬಡವರು, ಹರಿಜನರು ಮತ್ತು ಕೃಷಿ ಕಾರ್ಮಿಕರಿಗೆ ಮಂಜೂರು ಮಾಡಲಾಗುವುದೆ ?

ಶ್ರೀ ಕೆ. ಹೆಚ್. ಪಾಟೀಲ್. (ಕಂದಾಯ ಮಂತ್ರಿಗಳು).—

ಅ) ಹಾಸನ ತಾಲ್ಲೂಕು ಮಾರೇನಹಳ್ಳಿ ಗ್ರಾಮದಲ್ಲಿ ಅಮೃತ್ ಮಹಲ್ ಕಾವಲು ಜಮೀನು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

## ಗೇಣಿ ಶಾಸನ

೬೮೧. ಶ್ರೀ ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).— ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೇಣಿ ಶಾಸನದಡಿ ಭೂಮಿಯು ಅನುಭವದಲ್ಲಿರುವ ರೈತರಿಂದ ಕಂತನ್ನು ಸರ್ಕಾರವು ವಾಪತಿ ಮಾಡಿಸಿಕೊಳ್ಳುತ್ತಿರುವ ಬಗ್ಗೆ ಸರ್ಕಾರದವರ ಇತ್ತೀಚಿನ ನೀತಿ ಏನು ?

ಆ) ಅತಿ ಸಣ್ಣ ರೈತರಿಂದಲೂ (ಗೇಣಿದಾರರಿಂದಲೂ) ಕಂತಿನ ವಸೂಲಿ ನಡೆದಿರುವುದು ಹಾಗೂ ತಪ್ಪಿದಲ್ಲಿ ಅವರ ಜಮೀನನ್ನು ''ಸರ್ಕಾರಿ ಪಡಾ'' ಮಾಡಿಕೊಳ್ಳುತ್ತಿರುವುದು ನಿಜವೇ ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈಚೆಗೆ ತಿದ್ದುಪಡಿಯಾದ ಕಾನೂನಿನ ಮೇರೆಗೆ ದಿನಾಂಕ ೧೭-೧೦-೧೯೮೪ರ ನಂತರ ಕೊಡಬೇಕಾದ ಪ್ರೀಮಿಯಂ ಹಣದ ಕಂತುಗಳನ್ನು ಒಟ್ಟಿನಲ್ಲಿ ೧೦ ಎಕರೆಗಿಂತ ಕಡಿಮೆ ಇರುವ ಖುಷ್ಕಿ ಜಮೀನ ಅಥವಾ ಇತರೆ ವಿಧದ ಸಮಾನಾಂತರವಾದ ಜಮೀನು ಉಳ್ಳವರಿಗೆ ವಜಾ ಮಾಡಲಾಗಿದೆ.

ಆ) ಸರ್ಕಾರದ ೧೭-೩-೧೯೮೯ರ ಸಂತ್ಕೋಲೆಯನ್ನು ಹೊರಡಿಸಿದ ನಂತರ ಹತ್ತು ಎಕರೆಗಿಂತ ಕಡಿಮೆ ಖುಷ್ಕಿ ಜಮೀನಾಗಲೀ ಅಥವಾ ಅದಕ್ಕೆ ತತ್ಸಮಾನವಾದ ಇತರೆ ವಿಧದ ಜಮೀನನ್ನಾಗಲೀ ಹೊಂದಿದವರಿಂದ ಪ್ರೀಮಿಯಂ ಹಣದ ಕಂತುಗಳನ್ನು ವಸೂಲು ಮಾಡುವುದು ಸಮಂಜಸವಲ್ಲ. ಕೇವಲ ಕೆಲವೇ ಪ್ರಕರಣಗಳಲ್ಲಿ ಕಂತಿನ ಹಣ ವಸೂಲಿ ಮಾಡಿದೆ ಕೆಲವೇ ಪ್ರಕರಣಗಳಲ್ಲಿ ಜಮೀನನ್ನು ''ಸರ್ಕಾರಿ ಪಡಾ'' ಎಂದು ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.